2) ಕಮಲಾಪುರ ಶಾಖೆ – ಧಾರವಾಡ
3) ಹೊಸ ಯಲ್ಲಾಪುರ ಸೇವಾ ಕೇಂದ್ರ – ಧಾರವಾಡ
4) ನವಲೂರು ಶಾಖೆ – ಧಾರವಾಡ
5) ಇಂದಿರಾ ಗಾಜಿನ ಮನೆ ಶಾಖೆ – ಹುಬ್ಬಳ್ಳಿ
6) ಯಲ್ಲಾಪುರ ಓಣಿ ಶಾಖೆ – ಹುಬ್ಬಳ್ಳಿ
7) ಉಣಕಲ್ ಶಾಖೆ – ಹುಬ್ಬಳ್ಳಿ

ರಾಜ್ಯದಲ್ಲಿ ಆಯುರ್ವೇದ, ವೈದ್ಯಕೀಯ ವಿದ್ಯಾಲಯಗಳ ವಿವರ

4505 (5260) : ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಆಯುರ್ವೇದ, ವೈದ್ಯಕೀಯ ವಿದ್ಯಾಲಯಗಳು ಸ್ಥಾಪಿಸುವ ವರ್ಷಗಳು ಮತ್ತು ಅವರು ನೀಡುವ ಪದವಿಗಳ ವಿವರಗಳೊಂದಿಗೆ ಪ್ರತಿ ವರ್ಷ ಹೊರಬರುವ ವೈದ್ಯರುಗಳ ವಿವರ ಸರ್ಕಾರಿ ಮತ್ತು ಖಾಸಗೀ ಸಂಸ್ಥೆಗಳವಾರು ವಿವರ ನೀಡುವುದು;

ಆ) ಹೋಮಿಯೋಪತಿ ಕಾಲೇಜುಗಳು ಹಾಗೂ ಶಿಕ್ಷಣ ಸಂಸ್ಥೆಗಳು ವಿವಿಧ ಕೋರ್ಸ್‌ಗಳನ್ನು ನಡೆಸುವುದರಿಂದ ಪ್ರತಿ ವರ್ಷ ಹೊರ ಬರುವ ಡಾಕ್ಟರ್‌ಗಳ ವಿವರ ಒದಗಿಸುವುದು: (ಸರ್ಕಾರಿ ಮತ್ತು ಖಾಸಗೀ ಸಂಸ್ಥೆಗಳಿಂದ);

ಇ) ಇವುಗಳ ಬೆಳವಣಿಗೆಯ ದೃಷ್ಟಿಯಿಂದ ಸರ್ಕಾರ ಮಾಡುತ್ತಿರುವ ಸಹಾಯ ಸೌಲಭ್ಯಗಳು ಯಾವುವು: (ವಿವರ ನೀಡುವುದು);

ಈ) ಸದರಿ ವೈದ್ಯರು ಮತ್ತು ಸಿಬ್ಬಂದಿಗಳಿಗೆ ಬೇಕಾದ ಗಿಡ ಮೂಲಿಕೆಗಳ ಉತ್ಪಾದನೆಗೆ ಭೂಮಿ ನೀಡಿ ಸಹಾಯ ಮಾಡುವ ಉದ್ದೇಶ ಸರ್ಕಾರ ಹೊಂದಿದೆಯೇ: (ವಿವರ ಒದಗಿಸುವುದು)?

ಡಾ. ಎ.ಬಿ. ಮಾಲಕರೆಡ್ಡಿ (ವೈದ್ಯಕೀಯ ಶಿಕ್ಷಣ ಸಚಿವರು)

ಅ) ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯಗಳು ಸ್ಥಾಪಿಸಿದ ವರ್ಷದ ಬಗ್ಗೆ ವಿವರಗಳನ್ನು ಅನುಬಂಧ–ಅ ನಲ್ಲಿ ನೀಡಲಾಗಿದೆ. ಆಯುರ್ವೇದ ಕಾಲೇಜುಗಳಿಂದ ಹೊರ ಬರುವ ವೈದ್ಯರ ಸಂಖ್ಯೆ.

	ಸರ್ಕಾರಿ ಕಾಲೇಜು	ಖಾಸಗಿ ಕಾಲೇಜು
2001–02	126	734
2002–03	157	999

ಆ) ಹೋಮಿಯೋಪತಿ ಕಾಲೇಜುಗಳಿಂದ ಹೊರ ಬರುವ ವೈದ್ಯರ ಸಂಖ್ಯೆ

	ಸರ್ಕಾರಿ ಕಾಲೇಜು	ಖಾಸಗಿ ಕಾಲೇಜು
2001–02	37	432
2002–03	09	260

ಇ) ಅನುದಾನಿತ ಆಯುರ್ವೇದ ಕಾಲೇಜುಗಳಿಗೆ ಅನುದಾನ ಬಿಡುಗಡೆ ಮಾಡಲಾಗುತ್ತಿದೆ. ಕೇಂದ್ರ ಸರ್ಕಾರದಿಂದ ಹಲವಾರು ಸ್ಕೀಮ್‌ಗಳಲ್ಲಿ ರೂ. 1 ಕೋಟಿ 27 ಲಕ್ಷ ಸಹಾಯಧನವನ್ನು ಖಾಸಗಿ ಕಾಲೇಜುಗಳಿಗೆ ಒದಗಿಸಿ ಕೊಡಲಾಗುತ್ತಿದೆ.

ಈ) ಎಲ್ಲಾ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ತಾಲ್ಲೂಕು ಕೇಂದ್ರ ಅಥವಾ ಹತ್ತಿರದ ಸ್ಥಳದಲ್ಲಿ 5 ಎಕರೆ ಜಮೀನನ್ನು ಗಿಡಮೂಲಿಕೆ ಬೆಳೆಸಲು ನೀಡುವಂತೆ ಸೂಚಿಸಲಾಗಿರುತ್ತದೆ.

ಅನುಬಂಧ–ಅ

ಕ್ರಮ ಸಂಖ್ಯೆ	ವಿದ್ಯಾಲಯಗಳ ಹೆಸರು	ಸ್ಥಾಪಿಸಿದ ವರ್ಷ
1.	ಸರ್ಕಾರಿ ಆಯುರ್ವೇದಿಕ್ ಮೆಡಿಕಲ್ ಕಾಲೇಜ್, ಬೆಂಗಳೂರು.	1967
2.	ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜ್ ಆಫ್ ಆಯುರ್ವೇದ, ಹಾಸನ	1992
3.	ವಿ.ವಿ. ಸಮಿತಿಯ ಆಯುರ್ವೇದ ಮಹಾವಿದ್ಯಾಲಯ, ಬಿಜಾಪುರ	1995
4.	ಬಾಪೂಜಿ ಆಯುರ್ವೇದ ವೈದ್ಯಕೀಯ ಕಾಲೇಜ್, ಶಿವಮೊಗ್ಗ.	1996
5.	ಟಿ.ಎಂ.ಎ.ಇ. ಸಂಸ್ಥೆಯ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಹೊಸಪೇಟೆ, ಬಳ್ಳಾರಿ ಜಿಲ್ಲೆ.	1992
6.	ಸಿಂಧಗಿ ಶಾಂತವೀರೇಶ್ವರ ಆಯುರ್ವೇದಿಕ್ ಮೆಡಿಕಲ್ ಕಾಲೇಜ್, ಹಾವೇರಿ	1992
7.	ವೀರ ಪುಲಿಕೇಶಿ ವಿದ್ಯಾವರ್ಧಕ ಸಮಿತಿಯ ರೂರಲ್ ಆಯುರ್ವೇದ ವೈದ್ಯಕೀಯ ಕಾಲೇಜ್, ಬಾದಾಮಿ.	1997
8.	ಶ್ರೀ ಕಾಲಭೈರವೇಶ್ವರ ಸ್ವಾಮಿ ಇನ್ಸಿಟ್ಯೂಟ್ ಆಫ್ ಆಯುರ್ವೇದಿಕ್, ಬೆಂಗಳೂರು.	1996
9.	ಎಸ್.ಜಿ.ವಿ. ಆಯುರ್ವೇದ ಮೆಡಿಕಲ್ ಕಾಲೇಜು, ಬೆಳಗಾಂ.	1996
10.	ಕಾಳಿದಾಸ ಆಯುರ್ವೇದ ಮೆಡಿಕಲ್ ಕಾಲೇಜ್, ಬಾದಾಮಿ.	1992
11.	ಕನ್ನಡ ಬಳಗ ಸೊಸೈಟಿಸ್, ರೂರಲ್ ಆಯುರ್ವೇದ ಮೆಡಿಕಲ್ ಕಾಲೇಜ್, ಬೆಳಗಾಂ,	1997
12.	ಸರ್ಕಾರಿ ಪಂಡಿತ್ ತಾರಾನಾಥ ಆಯುರ್ವೇದ ಮೆಡಿಕಲ್ ಕಾಲೇಜ್, ಬಳ್ಳಾರಿ.	1947
13.	ಎನ್.ಕೆ. ಜಾಬಶೆಟ್ಟಿ ಆಯುರ್ವೇದ ಮೆಡಿಕಲ್ ಕಾಲೇಜ್, ಬೀದರ್.	1991
14.	ಡಾ: ಬಿ.ಎನ್.ಎಂ. ರೂರಲ್ ಆಯುರ್ವೇದ ಮೆಡಿಕಲ್ ಕಾಲೇಜ್ ಮತ್ತು ಆಸ್ಪತ್ರೆ, ಬಿಜಾಪುರ.	1992
15.	ಎಸ್.ವಿ.ವಿ.ಎಸ್. ರೂರಲ್ ಆಯುರ್ವೇದ ಮೆಡಿಕಲ್ ಕಾಲೇಜ್, ಬಾದಾಮಿ.	1997
16.	ಆಳ್ವಾಸ್ ಆಯುರ್ವೇದ ಮೆಡಿಕಲ್ ಕಾಲೇಜ್, ಮೂಡಬಿದ್ರೆ.	1996
17.	ಅಮೃತ್ ಆಯುರ್ವೇದ ಮೆಡಿಕಲ್ ಕಾಲೇಜ್, ಚಿತ್ರದುರ್ಗ.	1996
18.	ಕೆ.ಎ.ಜಿ. ಕಾಲೇಜ್ ಆಫ್ ಆಯುರ್ವೇದ, ಸುಳ್ಯ	1996
19.	ಶ್ರೀ ಗುರುವಾಲ್ಮೀಕಿ ಮಹರ್ಷಿ ಆಯುರ್ವೇದ ಮೆಡಿಕಲ್ ಕಾಲೇಜ್, ಜಗಳೂರು.	1996
20.	ಮಹಾಗಣಪತಿ ಆಯುರ್ವೇದ ಮೆಡಿಕಲ್ ಕಾಲೇಜ್, ಧಾರವಾಡ.	1992
21.	ಶ್ರೀ ಡಿ.ಜಿ.ಎಂ. ಆಯುರ್ವೇದ ಮೆಡಿಕಲ್ ಕಾಲೇಜ್, ಗದಗ್.	1976
22.	ಭಗವಾನ್ ಮಹವೀರ ಜೈನ್ ಆಯುರ್ವೇದ ಮೆಡಿಕಲ್ ಕಾಲೇಜ್, ಗಜೇಂದ್ರಘಡ್.	1992

1	2	3
23.	ಶ್ರೀ ಬಿ. ಎಂ. ಕಂಕಣವಾಡಿ ಆಯುರ್ವೇದ ಕಾಲೇಜ್, ಶಾಹಪುರ.	1933
24.	ಸಿಂದಗಿ ಶಾಂತವೀರೇಶ್ವರ ಆಯುರ್ವೇದ ಮೆಡಿಕಲ್ ಕಾಲೇಜ್, ಹಾವೇರಿ.	1992
25.	ಶ್ರೀ ಜಗದ್ಗುರು ಗವಿಸಿದ್ದೇಶ್ವರ ಆಯುರ್ವೇದ ಮೆಡಿಕಲ್ ಕಾಲೇಜ್, ಕೊಪ್ಪಳ.	1996
26.	ಜೆ.ಎಸ್.ಎಸ್. ಆಯುರ್ವೇದ ಮೆಡಿಕಲ್ ಕಾಲೇಜ್, ಮೈಸೂರು.	1966
27.	ಎಸ್.ವಿ.ಎಸ್. ಆಯುರ್ವೇದ ಮೆಡಿಕಲ್ ಕಾಲೇಜ್, ಮಾನ್ವಿ.	1996
28.	ಟಿ.ಎ.ಎಂ.ಇ., ಸೊಸೈಟೀಸ್ ಆಯುರ್ವೇದ ಮೆಡಿಕಲ್ ಕಾಲೇಜ್, ಭದ್ರಾವತಿ.	1992
29.	ಎಸ್.ಡಿ.ಎಂ. ಕಾಲೇಜ್ ಆಫ್ ಆಯುರ್ವೇದ, ಉಡುಪಿ.	1958
30.	ರಾಜೀವ್‌ಗಾಂಧಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ರೋಣ.	1992
31.	ತಾಲ್ಲೂಕು ಶಿಕ್ಷಣ ಪ್ರಸಾರಕ ಮಂಡಳಿ, ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಸಿಂದಗಿ.	1997
32.	ಜಕ್ರಿಯಾ ಆಯುರ್ವೇದ ಮೆಡಿಕಲ್ ಕಾಲೇಜ್, ಗುಲ್ಬರ್ಗಾ–585104.	2001
33.	ರಾಮಕೃಷ್ಣ ಆಯುರ್ವೇದ ಮೆಡಿಕಲ್ ಕಾಲೇಜ್, ಬೆಂಗಳೂರು.	1999
34.	ಶ್ರೀ ವಿಜಯ ಮಹಾಂತೇಶ್ ಆಯುರ್ವೇದ ಮೆಡಿಕಲ್ ಕಾಲೇಜ್, ಇಳ್‌ಕಲ್.	1992
35.	ಶ್ರೀ ಶಿವಯೋಗೀಶ್ವರ್ ಆಯುರ್ವೇದ ಮೆಡಿಕಲ್ ಕಾಲೇಜ್, ಇಂಚಲ.	1997
36.	ಜೆ.ಜಿ.ಕೋ–ಆಪರೇಟಿವ್ ಸೊಸೈಟೀಸ್ ಆಯುರ್ವೇದ ಮೆಡಿಕಲ್ ಕಾಲೇಜ್, ಘಟಪ್ರಭಾ.	1996
37.	ಟಿ.ಎಂ.ಎ.ಇ. ಸೊಸೈಟೀಸ್ ಆಯುರ್ವೇದ ಮೆಡಿಕಲ್ ಕಾಲೇಜ್, ಹೊಸಪೇಟೆ	1991
38.	ಎ.ವಿ.ಎಸ್. ಆಯುರ್ವೇದ ಮಹಾವಿದ್ಯಾಲಯ, ಬಿಜಾಪುರ	1955
39.	ಭರತೇಶ್ ಗ್ರಾಮೀಣ ಆಯುರ್ವೇದ ಮೆಡಿಕಲ್ ಕಾಲೇಜ್, ಬಿಜಾಪುರ.	1982
40.	ಬಾಪೂಜಿ ಆಯುರ್ವೇದ ಮೆಡಿಕಲ್ ಕಾಲೇಜ್, ಚಳಕೆರೆ.	1996
41.	ಅಶ್ವಿನಿ ಎಜುಕೇಷನ್ ಅಸೋಸಿಯೇಷನ್ ಆಯುರ್ವೇದ ಮೆಡಿಕಲ್ ಕಾಲೇಜ್, ದಾವಣಗೆರೆ.	1992
42.	ಆಯುರ್ವೇದ ಮಹಾವಿದ್ಯಾಲಯ, ಹುಬ್ಬಳ್ಳಿ.	1954
43.	ಶ್ರೀ ಎಸ್.ಬಿ.ಎಸ್. ಆಯುರ್ವೇದ ಮೆಡಿಕಲ್ ಕಾಲೇಜ್, ಮುಂಡರಗಿ.	1992
44.	ಶ್ರೀ ಹಿಂಗಾಲಾಂಬಿಕೆ ಎಜುಕೇಷನ್ ಸೊಸೈಟೀಸ್ ಆಯುರ್ವೇದ ಮೆಡಿಕಲ್ ಕಾಲೇಜ್, ಗುಲ್ಬರ್ಗಾ.	1996
45.	ಎಸ್.ಜಿ.ಎಂ. ಕಾಲೇಜ್ ಆಫ್ ಆಯುರ್ವೇದ, ಹಾಸನ.	1992
46.	ಎ.ಎಲ್.ಎನ್.ರಾವ್ ಮೆಮೋರಿಯಲ್ ಆಯುರ್ವೇದ ಮೆಡಿಕಲ್ ಕಾಲೇಜ್, ಕೊಪ್ಪ.	1987
47.	ಸರ್ಕಾರಿ ಆಯುರ್ವೇದ ಮೆಡಿಕಲ್ ಕಾಲೇಜ್, ಮೈಸೂರು.	1908
48.	ಬಾಪೂಜಿ ಆಯುರ್ವೇದ ಮೆಡಿಕಲ್ ಕಾಲೇಜ್, ಶಿವಮೊಗ್ಗ.	1996
49.	ಧನ್ವಂತರಿ ಆಯುರ್ವೇದ ಕಾಲೇಜ್, ಉತ್ತರ ಕನ್ನಡ.	1998

1	2	3
50.	ಮುನಿಯಾಲ್ ಕಾಲೇಜ್ ಆಫ್ ಆಯುರ್ವೇದ, ಉಡುಪಿ.	1998
51.	ಶುಶ್ರೂತ ಆಯುರ್ವೇದ ಮೆಡಿಕಲ್ ಕಾಲೇಜ್, ಬೆಂಗಳೂರು.	2002

ಕರ್ನಾಟಕ ವಿಶ್ವವಿದ್ಯಾಲಯದ ಶಿಕ್ಷಣದಲ್ಲಿ ವಿಜ್ಞಾನ ಗ್ರಾಮ ನಿರ್ಮಾಣ

4506 (5305) : ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವಿಶ್ವವಿದ್ಯಾಲಯದ ಶಿಕ್ಷಣಗಳಲ್ಲಿ ರಾಷ್ಟ್ರದ ಮುಂದಿನ ಪ್ರಜೆಗಳನ್ನು ರೂಪಿಸುವ ಯೋಜನೆಗಳು ಇವೆಯೇ;

ಆ) ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ವಿಜ್ಞಾನ ಗ್ರಾಮ ನಿರ್ಮಿಸುವ ಮತ್ತು ಐಎಟಿ ಪ್ರಾರಂಭಿಸುವ ಯೋಜನೆ ಯಾವ ಹಂತದಲ್ಲಿದೆ?

ಇ) ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಇರುವ ಸೌಲಭ್ಯಗಳನ್ನು ಗಮನಿಸಲಾಗಿದೆಯೇ: (ವಿವರ ನೀಡುವುದು);

ಡಾ. ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು)

ಅ) ಹೌದು. ಉನ್ನತ ಶಿಕ್ಷಣವೆಂಬುದು ದೂರ ಶಿಕ್ಷಣ ಹಾಗೂ ಅಂಬೆ ಶಿಕ್ಷಣದ ಮೂಲಕ ಸಾರ್ವತ್ರಿಕವಾಗಿ ಪ್ರಚಲಿತವಾಗಿದ್ದು ಇದು ಯಾವುದೇ ವಯೋಮಾನ, ಸ್ಥಳ ಹಾಗೂ ವಿದ್ಯಾರ್ಹತೆಗಳು ಏನೇ ಇರಲಿ ಬಯಸುವವರಿಗೆ ಇದು ಈಗ ಸಿಗುವಂತದ್ದಾಗಿದೆ. ಆಧುನಿಕತೆಯ ಅವಶ್ಯಕತೆಗೆ ಅನುಗುಣವಾಗಿ ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸುಗಳನ್ನು ಪರಿಷ್ಕರಿಸಲಾಗಿದೆ. ಸಾಂಪ್ರದಾಯಿಕ/ವೃತ್ತಿಪರ/ತಾಂತ್ರಿಕ/ಅರೆವೈದ್ಯಕೀಯ ಕೋರ್ಸುಗಳಲ್ಲದೇ ಉದಯೋನ್ಮುಖ ಕೋರ್ಸುಗಳಾದ ಬಿ.ಸಿ.ಎ, ಬಿ.ಬಿ.ಎಂ. ಎಂ.ಸಿ.ಎ ಮತ್ತು ಎಂ.ಬಿ.ಎ. ಕೋರ್ಸುಗಳನ್ನು ವಿಶ್ವವಿದ್ಯಾಲಯಗಳಲ್ಲಿ ಪ್ರಾರಂಭಿಸಲಾಗಿದೆ. ಬಯೋಟೆಕ್ನಾಲಜಿ, ಕಂಪ್ಯೂಟರ್ ವಿಜ್ಞಾನ, ಮೈಕ್ರೋ ಬಯಾಲಜಿ, ಜೆನಟಿಕ್ಸ್ ನಂತಹ ಇನ್ನೂ ಅನೇಕ ಹೊಸ ವಿಷಯಗಳು ಪ್ರಾಮುಖ್ಯತೆಯನ್ನು ಪಡೆದಿವೆ. ವಿದ್ಯಾರ್ಥಿಗಳಲ್ಲಿ, ಸಂಪರ್ಕ ಮಾಧ್ಯಮ/ತಾಂತ್ರಿಕ/ವೃತ್ತಿಪರ/ಸಂಶೋಧನಾತ್ಮಕ ಕುಶಲತೆಗಳನ್ನು ರೂಢಿಸಲು ಉನ್ನತ ಶಿಕ್ಷಣವನ್ನು ರೂಪಿಸಲಾಗಿದೆ. ಮಾನವಿಕ ಮತ್ತು ಸಾಮಾಜಿಕ ವಿಜ್ಞಾನಗಳ ನಿಕಾಯಗಳು ಈ ದಿಶೆಯಲ್ಲಿ ವಿದ್ಯಾರ್ಥಿಗಳಲ್ಲಿ, ದೇಶಭಕ್ತಿ, ರಾಷ್ಟ್ರೀಯ ಭಾವೈಕ್ಯತೆ, ನಾವೆಲ್ಲಾ ಒಂದೇ ಎಂಬ ಗುಣಗಳನ್ನು ಪಡೆಯಲು ಕೊಡುಗೆಯನ್ನು ನೀಡಿವೆ. ಎನ್.ಸಿ.ಸಿ, ಎನ್.ಎಸ್.ಎಸ್ ಮತ್ತು ಸ್ಕೌಟ್ ನಂತಹ ಸಂಸ್ಥೆಗಳು ವಿದ್ಯಾರ್ಥಿಗಳ ನೈತಿಕ ಮಟ್ಟವನ್ನು ಹೆಚ್ಚಿಸುವಲ್ಲಿ ಸಹಾಯಕಾರಿಯಾಗಿವೆ.

ಆ) ಕರ್ನಾಟಕ ವಿಶ್ವವಿದ್ಯಾಲಯದ ಆವರಣದಲ್ಲಿ ವಿಜ್ಞಾನ ನಗರ ಸ್ಥಾಪನೆಗೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯದ ಒಡೆತನದ ಸುಮಾರು 50 ಎಕರೆ ಭೂಮಿಯನ್ನು ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಗೆ ಹಸ್ತಾಂತರಿಸಲು ಕ್ರಮ ಜರುಗಿಸಲಾಗಿದೆ. ಈ ಕುರಿತು ಈಗಾಗಲೇ 25 ಎಕರೆ ಜಮೀನನ್ನು ದಿನಾಂಕ: 8-1-2003ರಂದು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಧೀನಕ್ಕೆ ಒಪ್ಪಿಸಲಾಗಿದೆ.